ದಿನಾಂಕ 31-03-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ** ಎ.ಡಿ.ಜಿ.ಪಿ ಯವರಿಂದಃ

3. ಗೋಪಾಲಕೃಷ್ಣ ದೇವರು ಒಂದು ಹಂತದಲ್ಲಿ ಉಡುಪಿಯ ಮೂಲ ದೇವರು. ಸಾಕ್ಷಿ ಮುಂದುವರಿದು ಆದಿ ಉಡುಪಿ ಎನ್ನುತ್ತಾರೆ. ಚಂದ್ರಮೌಳೀಶ್ವರು ದೇವರು ಎಂದರೆ ಈಶ್ವರ. ಮಠದ ಪರಂಪರೆಯ ಬಗ್ಗೆ ನನಗೆ 9 ವರ್ಷ ಪ್ರಾಯದಿಂದ ಅನುಭವ ಇರುತ್ತದೆ. ನನಗೆ 9 ವರ್ಷ ಪ್ರಾಯದಲ್ಲಿ ಹೆಚ್ಚಿನ ಅನುಭವ ಇರಲಿಲ್ಲ. ನನಗೆ ಸಾಮಾನ್ಯ ತಿಳುವಳಿಕೆ ನನ್ನ 14 ವರ್ಷ ಪ್ರಾಯದಲ್ಲಿ ಬಂದಿರುತ್ತದೆ. ನನ್ನ 17 ವರ್ಷದಲ್ಲಿ ಆಧ್ಯಾತ್ಮ ಹಾಗೂ ಧರ್ಮದ ಬಗ್ಗೆ ತಿಳುವಳಿಕೆ ಇತ್ತು. ಸನಾತನ ಧರ್ಮದ ಬಗ್ಗೆ ನನಗೆ ಗೊತ್ತಿದೆ. ಸನಾತನ ಧರ್ಮ ಎಂದರೆ ಅನಾದಿ ಕಾಲದಿಂದ ಬಂದ ಹಿಂದು ಧರ್ಮ. ನಾನು ಹುಟ್ಟು ವೈಷ್ಣವ. ಮಧ್ವಾಚಾರ್ಯರು ಹುಟ್ಟು ಭಾಗವತ ಧರ್ಮದವರು. ಮಧ್ವಾಚಾರ್ಯರು ವೈಷ್ಣವ ಧರ್ಮವನ್ನು ಸ್ಥಾಪನೆ ಮಾಡಿರುತ್ತಾರೆ. ಮಧ್ವ ಮಠದ ಸಂಪ್ರದಾಯದ ಬಗ್ಗೆ 40 ವರ್ಷದ ನಂತರ ನನಗೆ ಹೆಚ್ಚಿನ ಅನುಭವ ಇರುತ್ತದೆ.

4. ಧರ್ಮ ಎಂದರೆ ಯಾವುದು ಸರಿ ಮತ್ತು ಯಾವುದು ತಪ್ಪು ಎಂದು ನಡೆಯುವುದು. ಅದೇ ಪ್ರಕಾರವಾಗಿ ನಾನು ನ್ಯಾಯಾಲಯಕ್ಕೆ ಸಾಕ್ಷಿ ನುಡಿಯಲು ಬಂದಿರುತ್ತೇನೆ. ಮಧ್ವಾಚಾರ್ಯರ ಮೂಲ ಹೆಸರು ವಾಸುದೇವ. ಮಧ್ವಾಚಾರ್ಯರ ತಾಯಿ ವೇದಾವತಿ, ತಂದೆ ನಡ್ಯಂತಿಲ್ಲಾಯ. ಅವರು ಪಾಜಕ ಮೂಲದವರು. ಚಂದ್ರಮೌಳೀಶ್ವರ ದೇವಸ್ಥಾನಕ್ಕೆ ಮಧ್ವಾಚಾರ್ಯರು ಬರುವ ಮೊದಲು ಅಲ್ಲಿ ಯಾರಿದ್ದರು ಎಂದು ನನಗೆ ಗೊತ್ತಿಲ್ಲ, ಈ ಬಗ್ಗೆ ಚರಿತ್ರೆಯಲ್ಲೂ ಇಲ್ಲ. ನಾನು ಮಧ್ವ ವಿಜಯ ಪುಸ್ತಕದ ಆಧಾರದ ಮೇಲೆ ಸಾಕ್ಷಿ ನುಡಿಯುತ್ತಿದ್ದೇನೆ. ಮಧ್ವಾಚಾರ್ಯರ ಚರಿತ್ರೆಯ ಪ್ರಕಾರ ಅವರು ಚಿಕ್ಕ ವಯಸ್ಸಿನಿಂದಲೇ ಅನೇಕ ಪವಾಡಗಳನ್ನು ಮಾಡುತ್ತಿದ್ದರು ಎಂದರೆ ಸರಿ. ಮಧ್ವಾಚಾರ್ಯರು ಮಾಡಿದ ಪವಾಡಗಳಿಂದ ಅವರು ಪ್ರಸಿದ್ದರಾಗಿದ್ದರು ಎಂದರೆ ಸಾಕ್ಷಿ ಅವರು ಪವಾಡ ಎಂದು ಮಾಡಿದ್ದಲ್ಲ, ಸಾಮಾನ್ಯ ಜನರಿಗೆ ಅವರು ಮಾಡಿದ್ದೆಲ್ಲವೂ ಪವಾಡವಾಗಿ ಕಂಡಿರುತ್ತದೆ

ಎನ್ನುತ್ತಾರೆ. ಸನ್ಯಾಸದ ಜೀವನವನ್ನು ಅನುಭವಿಸಬೇಕು ಎಂದು ಮಧ್ವಾಚಾರ್ಯರ ಇಚ್ಛೆಯಾಗಿತ್ತು ಎಂದರೆ ಸರಿ. ಈಗಿನ ಸನ್ಯಾಸದ ಜೀವನದ ಬಗ್ಗೆ ಅವರ ಅಭಿಮತ ಇರಲಿಲ್ಲ ಎಂದರೆ ಸಾಕ್ಷಿ ಈಗಿನ ಕಾಲವೇ ಬೇರೆ, ಆಗಿನ ಕಾಲವೇ ಬೇರೆ ಎನ್ನುತ್ತಾರೆ. ಮಧ್ವಾಚಾರ್ಯರ ಸಿದ್ಧಾತದ ಪ್ರಕಾರ ವೈಭವ ಪೂರಿತ ಪರಂಪರೆಯನ್ನು ಅನುಸರಿಸುವುದು ಇಲ್ಲ ಎಂದರೆ ಸರಿ. ಮಧ್ವಾಚಾರ್ಯರು ತುಂಬಾ ಸಾತ್ವಿಕವಾದ ಜೀವನ ಮತ್ತು ಪರಂಪರೆಯನ್ನು ಮುಂದುವರಿಸಬೇಕು ಎಂಬ ಇಚ್ಛೆಯನ್ನು ಹೊಂದಿದ್ದರು ಎಂದರೆ ಸರಿ. ಮಧ್ವಾಚಾರ್ಯರಿಗೆ ಆಸ್ತಿ ಅಂತಸ್ತುಗಳನ್ನು ಕ್ರೋಢೀಕರಿಸುವ ಇಚ್ಛೆ ಇರಲಿಲ್ಲ ಎಂದರೆ ಸರಿ. ಅವರು ವಿಷ್ಣು ಒಬ್ಬನೇ ದೇವರು ಎಂದು ಭಾವಿಸಿದ್ದರು ಎಂದರೆ ಸಾಕ್ಷಿ ವಿಷ್ಣು ಸರ್ವೋತ್ತಮ ಎಂದು ಭಾವಿಸಿದ್ದರು. ಮಧ್ವಾಚಾರ್ಯರಿಗೆ ಬೇರೆ ದೇವರುಗಳ ಬಗ್ಗೆ ಅಸಡ್ಡೆ ಇರಲಿಲ್ಲ ಆದರೆ ತಾರತಮ್ಯ ಇತ್ತು. ಮಧ್ವಾಚಾರ್ಯರ ಪ್ರಕಾರ ಮೊದಲು ವಿಷ್ಣು, ಆ ನಂತರ ಲಕ್ಷ್ಮಿ, ಬ್ರಹ್ಮ, ಇತ್ಯಾದಿ ಲಿಸ್ಟ್ ಇತ್ತು.

5. ನಾನು ನಿವೃತ್ತ ಅಧ್ಯಾಪಕ. ಭಾರತದಲ್ಲಿ ದ್ರಾವಿಡರು ಯಾವ ಪರಂಪರೆಯನ್ನು ಅನುಸರಿಸುತ್ತಿದ್ದರು ಎಂದು ಸುಲಭವಾಗಿ ಹೇಳಲು ಆಗುವುದಿಲ್ಲ. ನಾನು ಪ್ರಾಧ್ಯಾಪಕನಾಗಿದ್ದರಿಂದ ಇತಿಹಾಸ ಓದಿದ್ದೇನೆ ಎಂದರೆ ಸಾಕ್ಷಿ ನನ್ನ ಮೂಲ ವಿಷಯ ಇತಿಹಾಸ ಅಲ್ಲ ಎನ್ನುತ್ತಾರೆ. ಸಾಮಾನ್ಯವಾಗಿ ಹತ್ತನೇ ತರಗತಿವರೆಗೂ ಮತ್ತು ನಂತರ ಇತಿಹಾಸ ಪಠ್ಯದಲ್ಲಿ ಇತ್ತು ಎಂದರೆ ಸರಿ. ಹರಪ್ಪ ಮತ್ತು ಮಹೆಂಜೊದಾರೋ ಬಗ್ಗೆ ನನಗೆ ಓದಿದ ಬಗ್ಗೆ ನೆನಪಿದೆ. ಉತ್ಕಲನದ ಪ್ರಕಾರ ಪಶುಪತಿ ಎಂಬುದು ದ್ರಾವಿಡರ ಮೂಲ ದೇವರು ಎಂಬುದಾಗಿತ್ತು ಎಂದರೆ ಸರಿ. ಭಾರತದ ಮೂಲ ನಿವಾಸಿಗಳು ದ್ರಾವಿಡರು ಎಂದರೆ ಸರಿ. ಆ ಸಮಯದಲ್ಲಿ ಆರ್ಯರು ಭಾರತಕ್ಕೆ ದಂಡೆತ್ತಿ ಬಂದರು ಎಂದರೆ ಸಾಕ್ಷಿ ಬಾಲ್ಯದಲ್ಲಿ ಒಪ್ಪಿದ್ದೆ, ಈಗ ನಾನು ಅದನ್ನು ಒಪ್ಪಲು ಆಗುವುದಿಲ್ಲ ಎನ್ನುತ್ತಾರೆ. ಆರ್ಯರು ಭಾರತಕ್ಕೆ ದಂಡೆತ್ತಿ ಬಂದಾಗ ಹೆಚ್ಚಿನ ದ್ರಾವಿಡರು ದಕ್ಷಿಣಕ್ಕೆ ವಲಸೆ ಬಂದರು ಎಂದರೆ ಸಾಕ್ಷಿ ನಾನು ಒಪ್ಪುವುದಿಲ್ಲ ಎನ್ನುತ್ತಾರೆ. 1952 ರ ಹಿಂದೆ ಕರಾವಳಿ ಕರ್ನಾಟಕದಲ್ಲಿ ಹೆಚ್ಚಿನ ದೇವಾಲಯಗಳು ಶೈವ ದೇವಾಲಯಗಳು ಎಂದರೆ ಸರಿ. ಮಧ್ವಾಚಾರ್ಯರ ನಂತರವೇ ಈ ಭಾಗದಲ್ಲಿ ವೈಷ್ಣವ ಧರ್ಮ ಬೆಳವಣಿಗೆ ಆಗಿದ್ದು ಎಂದರೆ ಸರಿ. ಅವರ ಧರ್ಮ ಪ್ರಚಾರದಿಂದಾಗಿ ಇಲ್ಲಿಯ ಜನರ

ಮೇಲೆ ವೈಷ್ಣವ ಪರಂಪರೆ ತನ್ನ ಹಿಡಿತವನ್ನು ಸ್ಥಾಪಿಸಿತು ಎಂದರೆ ಸರಿ. ಬನ್ನಂಜೆ ಗೋವಿಂದಾಚಾರ್ಯರು ಮಧ್ವ ಪರಂಪರೆಗೆ ಸಂಬಂದಿಸಿದಂತೆ ಹೆಚ್ಚಿನ ಮಾಹಿತಿ ಉಳ್ಳವರು ಎಂದರೆ ಸರಿ. ಬನ್ನಂಜೆ ಗೋವಿಂದಾಚಾರ್ಯರು ವೈಷ್ಣವ ಪರಂಪರೆ ಮತ್ತು ಕೃಷ್ಣ ಮಠದ ಬಗ್ಗೆ ಹೆಚ್ಚಿನ ವಿವರಗಳನ್ನು ತಮ್ಮ ಬರಹಗಳಲ್ಲಿ ತಿಳಿಸಿದ್ದಾರೆ ಎಂದರೆ ಸರಿ. ಅವರ ಹೇಳಿಕೆಗಳನ್ನು ಪೇಜಾವರ ಮಠದ ವಿಶ್ವೇಶ್ವರ ತೀರ್ಥ ಸ್ವಾಮಿಜಿಗಳು ಒಪ್ಪಿದ್ದಾರೆ ಎಂದರೆ ಸರಿ.

6. ಕೃಷ್ಣ ಮಠ ಇರುವ ಸ್ಥಳದ ಹಳೆಯ ಹೆಸರು ರಜತಪೀಠ ಪುರ. ಕೃಷ್ಣ ಮಠ ಇರುವ ಪ್ರದೇಶ ಚಂದ್ರಮೌಳೀಶ್ವರನ ಉದ್ಭವವಾದ ನಂತರ ಅದಕ್ಕೆ ಶಿವನ ಹಳ್ಳಿ ಎಂದು, ನಂತರ ಅದು ಶಿವಳ್ಳಿ ಎಂದು ಕರೆಯಲಾಗುತ್ತದೆ. ಉಡುಪರು ಎಂಬ ಬ್ರಾಹ್ಮಣ ಕುಟುಂಬ ಇದೆ. ಉಡುಪ ಬ್ರಾಹ್ಮಣ ಕುಟುಂಬದವರು ಶೈವ ಪರಂಪರೆಯನ್ನು ಅನುಸರಿಸುತ್ತಾರೆ ಎಂದರೆ ಸಾಕ್ಷಿ ಕೆಲವರು ಅನುಸರಿಸುತ್ತಾರೆ ಎನ್ನುತ್ತಾರೆ. ಉಡುಪಿಯಲ್ಲಿ ಇಂದಿಗೂ ಶೈವ ಮತ್ತು ವೈಷ್ಣವ ಎರಡೂ ಪರಂಪರೆಯ ಬ್ರಾಹ್ಮಣರು ಇದ್ದಾರೆ ಎಂದರೆ ಸರಿ. ಹಿಂದಿನ ಶೈವ ಪರಂಪರೆಯ ಬ್ರಾಹ್ಮಣರು ಮಧ್ವಾಚಾರ್ಯರ ಪ್ರಭಾವದಿಂದ ವೈಷ್ಣವ ಪರಂಪರೆಗೆ ಬದಲಾವಣೆ ಹೊಂದಿದ್ದಾರೆ ಎಂದರೆ ಸರಿ. ಇಂದಿಗೂ ಕರಾವಳಿ ಕರ್ನಾಟಕದಲ್ಲಿ ವೈಷ್ಣವರು, ಶೈವರು ಬಹಳ ಸಂಖ್ಯೆಯಲ್ಲಿ ಇದ್ದಾರೆ ಎಂದರೆ ಸರಿ. ಅವರಲ್ಲಿ ಶೈವರು ಶಿವನನ್ನು, ವೈಷ್ಣವರು ವಿಷ್ಣುವನ್ನು ಆರಾಧಿಸುತ್ತಾರೆ ಎಂದರೆ ಸಾಕ್ಷಿ ವಿಷ್ಣುವನ್ನು ಸರ್ವೋತ್ತಮ ಎಂದು ಆರಾಧಿಸುತ್ತಾರೆ ಎನ್ನುತ್ತಾರೆ. ನನ್ನ ಪ್ರಕಾರ ವೈಷ್ಣವರು ಸಹ ಶಿವನನ್ನು ಆರಾಧಿಸುತ್ತಾರೆ. ಉಡುಪಿಯಲ್ಲಿ ಚಂದ್ರಮೌಳೀಶ್ವರ ದೇವರು ಸಹ ಪೂಜೆ ಇತ್ಯಾದಿಗಳನ್ನು ಪಡೆಯುತ್ತಿದ್ದಾರೆ ಎಂದರೆ ಸರಿ. ಚಂದ್ರಮೌಳೀಶ್ವರ ದೇವಸ್ಥಾನವು ಸರ್ಕಾರದ ಅಧೀನದಲ್ಲಿ ನಡೆಯುತ್ತಿದೆ ಎಂದರೆ ಸರಿ. ಅಲ್ಲಿ ಶೈವರು ಮತ್ತು ವೈಷ್ಣವರು ಆರಾಧಿಸುವುದರಿಂದ ಶಿವ ತತ್ತ್ವದ ಆರಾಧನೆಯ ಅವಶ್ಯಕತೆ ಇದೆ ಎಂದರೆ ಸರಿ. ವೈಷ್ಣವ ಪರಂಪರೆಯ ಕೃಷ್ಣ ಮಠದಲ್ಲಿ ಶಿವರಾತ್ರಿಯ ಉತ್ಸವ ನಡೆಯವುದಿಲ್ಲ, ಆದರೆ ಆಚರಣೆ ಇದೆ. ಶಿವರಾತ್ರಿ ಆಚರಣೆ ಕೃಷ್ಣ ಮಠದಲ್ಲಿ ಆಚರಿಸುವುದಿಲ್ಲ.

7. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಕೃಷ್ಣನಿಗೆ ಏನು ಉತ್ಸವ ಆಗುತ್ತದೋ ಅದೇ ಉತ್ಸವ ಚಂದ್ರಮೌಳೀಶ್ವರನಿಗೂ ಆಗುತ್ತದೆ. ಶೈವ ದೇವಸ್ಥಾನ ಚಂದ್ರಮೌಳೀಶ್ವರನ ವಿಶೇಷ ದಿನಗಳಲ್ಲಿ ವಿಶೇಷವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾಗುತ್ತದೆ. ಮಠದ ಪರಂಪರೆಯಲ್ಲಿ ಅದರದ್ದೇ ಆದ ವ್ಯಾಪ್ತಿ ಇದ್ದು, ಅದಕ್ಕೆ ಸೀಮಿತವಾಗಿದೆ ಎಂದರೆ ಸರಿ. ಮಠದಲ್ಲಿ ಮಧ್ವ ಸಿದ್ಧಾಂತದ ಬಗ್ಗೆ ಪ್ರಚಾರ ಪಡಿಸುವ ಹೆಚ್ಚಿನ ಕಾರ್ಯ ಮಾಡಬೇಕಾಗುತ್ತದೆ ಎಂದರೆ ಸರಿ. ಸರ್ಕಾರದ ಅಧೀನದಲ್ಲಿ ಚಂದ್ರಮೌಳೀಶ್ವರನ ಉತ್ಸವಗಳು ನಡೆಯುತ್ತಿದ್ದು ಅದಕ್ಕೆ ಯಾವುದೇ ಬಾಧಕ ಬಂದಿಲ್ಲ ಎಂದರೆ ಸರಿ. ಸರ್ಕಾರವು ಸಹ ಚಂದ್ರಮೌಳೀಶ್ವರ ದೇವಸ್ಥಾನದ ಉಸ್ತುವಾರಿಯಲ್ಲಿ ಯಾವುದೇ ಕಡಿಮೆ ಮಾಡಿಲ್ಲ ಎಂದರೆ ಸರಿ. ಚಂದ್ರಮೌಳೀಶ್ವರ ದೇವಸ್ಥಾನದ ಭಕ್ತರಿಗೆ ಎಲ್ಲಾ ಸೌಲಭ್ಯಗಳನ್ನು ಒದಗಿಸಲಾಗಿದೆ ಎಂದರೆ ಸರಿ. ಇಲ್ಲಿಯವರಗೊ ಚಂದ್ರಮೌಳೀಶ್ವರ ದೇವಸ್ಥಾನದ ಆಡಳಿತಕ್ಕೆ ಸಂಬಂದಿಸಿದಂತೆ ಯಾವುದೇ ಚ್ಯುತಿ ಬಂದಿಲ್ಲ ಎಂದೆರ ಸರಿ. ಇನ್ನೂ ಮುಂದಕ್ಕೂ ಸಹ ಸರ್ಕಾರದ ಉಸ್ತುವಾರಿಯಲ್ಲಿ ಚಂದ್ರಮೌಳೀಶ್ವರ ದೇವಸ್ಥಾನವು ಈಗ ನಡೆದಂತೆ ನಡೆದರೆ ನನ್ನದೇನೂ ತಕರಾರು ಇಲ್ಲ. ಚಂದ್ರಮೌಳೀಶ್ವರ ದೇವಸ್ಥಾನವು ಉತ್ತಮವಾಗಿ ನಡೆಯುತ್ತಿದ್ದು, ಅದೇ ಮುಂದುವರಿದುಕೊಂಡು ಹೋಗಲಿ ಎಂದರೆ ಸಾಕ್ಷಿ ಅಷ್ಟ ಮಠದ ಪರಂಪರೆಯ ಪ್ರಕಾರ ನಡೆಯಬೇಕು ಎನ್ನುತ್ತಾರೆ. ಶೈವ ಮತ್ತು ವೈಷ್ಣವ ಪರಂಪರೆಗಳು ಭಿನ್ನವಾದ ಪರಂಪರೆಗಳು ಎಂದರೆ ಸರಿ.

**ಪಾಟೀ ಸವಾಲುಃ** ಎ.ಡಿ.ಜಿ.ಪಿಯವರು ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದು, ಈ ಪ್ರಕರಣವು ಮಾನ್ಯ ಉಚ್ಚ ನ್ಯಾಯಾಲಯದ ನಿರ್ದೇಶನ ಪತ್ರ ಸಂಖ್ಯೆ ಆರ್.ಎಸ್.ಬಿ.9/2016 ದಿನಾಂಕ 07-01-2021 ರಂತೆ ಈ ಕೋರ್ಟಿನ 25 ಹಳೇಯ ಪ್ರಕರಣಲ್ಲಿ ಮೂರನೇ ಸಂಖ್ಯೆಯಲ್ಲಿದ್ದು, adjournment ಗೆ ಯಾವುದೇ ಕಾರಣ ನೀಡಿಲ್ಲದ ಕಾರಣ, ಮನವಿಯನ್ನು ತಿರಸ್ಕರಿಸಿ ಮುಂದುವರಿದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

ಪ್ರ.ಹಿ.ಸಿ.ನ್ಯಾ. ಉಡುಪಿ.